# ಕರ್ನಾಟಕ ಸರ್ಕಾರ

## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.

## ಸಿ.ಸಿ.ನಂ.68/2019

ಪಿ.ಡಬ್ಲ್ಯೂ: 4

ಸಿ.ಡಬ್ಲ್ಯೂ: 3

ಸಾಕ್ಷಿದಾರರ ಹೆಸರು : ಲಕ್ಷ್ಮಣ

ತಂದೆಯ ಹೆಸರು: : ಲೇಟ್ ಮಹೇಶ್ವರಪ್ಪ

ವಯಸ್ಸು : **51 ವರ್ಷ**

ಉದ್ಯೋಗ : ವ್ಯವಸಾಯ

ವಾಸಸ್ಥಳ : ಕೆಂಚಾಪುರ ಗ್ರಾಮ

**ದಿನಾಂಕ: 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

1, 2, 5, 6 ನೇ ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಈಗ್ಗೆ ಸುಮಾರು 6-7 ವರ್ಷಗಳ ಹಿಂದೆ ಚಾಸಾ-1 ರವರು ಅವರ ಮನೆಯ ಹಿಂದೆ ಹಾಕಿದ್ದ ಅಡಿಕೆಯನ್ನು ಕಳ್ಳತನ ಮಾಡಿರುವ ಬಗ್ಗೆ ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ನಂತರ ನಾನು ಹೋಗಿ ನೋಡಿದಾಗ ಮೂರು ಟಾರ್ಪಲ್ ಗಳನ್ನು ಕಟ್ ಮಾಡಿ ಅಡಿಕೆ ಕಳ್ಳತನ ಮಾಡಿರುವುದು ಕಂಡುಬಂದಿತು. ಸುಮಾರು 5-6 ಚೀಲ ಅಡಿಕೆಯನ್ನು ಕಳ್ಳತನ ಮಾಡಿರುವುದ ಕಂಡುಬಂದಿತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು-1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ** ಶ್ರೀ ಎವಿ **ವಕೀಲರಿಂದ.**

ಚಾಸಾ-1 ರವರು ನನಗೆ ಪರಿಚಯಸ್ಥರು. ಯಾವ ದಿನಾಂಕದಂದು ಕಳ್ಳತನವಾಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಚಾಸಾ-1 ರವರು ಕರೆ ಮಾಡಿ ತಿಳಿಸಿದ ಮೇರೆಗೆ ನನಗೆ ವಿಚಾರ ತಿಳಿದುಬಂದಿರುತ್ತದೆ ಎಂದರೆ ಸರಿ. ಚಾಸಾ-1 ರವರಿಗೆ ಯಾವ ಸರ್ವೆ ನಂಬರ್ ನಲ್ಲಿ ಅಡಿಕೆ ತೋಟ ಇದೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಇದು ಚಾಸಾ-1 ರವರದ್ದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದೇ ಮುದ್ದೆ ಮಾಲು ಎಂದು ಹೇಳಲು ಯಾವುದಾದರೂ ಪ್ರತ್ಯೇಕ ಗುರುತುಗಳು ಇವೆಯೇ ಎಂದರೆ ಸಾಕ್ಷಿ ಹಳದಿ ಬಣ್ಣದ ಇದೇ ಟಾರ್ಪಲ್ ಎಂದು ನುಡಿದಿರುತ್ತಾರೆ. ಚಾಸಾ-1 ರವರಿಗೆ

ಯಾವುದೇ ಅಡಿಕೆ ತೋಟ ಇರುವುದಿಲ್ಲ, ಯಾವುದೇ ಕಳ್ಳತನವಾಗದೇ ಇದ್ದರೂ ಚಾಸಾ-1 ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>ಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**